# ಅಪ್ಪ ಮತ್ತು ಡಾಗಿ



■ ತಮ್ಮಣ್ಣ ಬೀಗಾರ
ಕಲೆ: ಸಂತೋಷ್ ಸಸಿಹಿತ್ಲು

ಪುಟ್ಟಿ ಆನೆಮರಿಯನ್ನು ಎತ್ತಿ ಅದರ ಬಾಲ ಎಷ್ಟು ಚಿಕ್ಕದಾಗಿದೆ ಎಂದು ನೋಡುತ್ತಿದ್ದಳು. ಪುಟ್ಟಿ ಆನೆಮರಿಯನ್ನು ಎತ್ತಿದ್ದು ಹೇಗೆ ಎಂದು ನಿಮಗೆ ಅನಿಸಿರಬಹುದು. ಹಾಂ... ನೀವು ಯೋಚಿಸಿದ್ದು ಸರಿ. ಅದು ಅವಳ ಆಟಿಕೆ ಗೊಂಬೆ. ಅವಳ ಹತ್ತಿರ ಇನ್ನೂ ಗೊಂಬೆಗಳಿವೆ. ಆದರೆ ಪುಟ್ಟಿಗೆ ಪುಟಾಣಿ ಆನೆ ಮರಿ ಹಾಗೂ ಪುಟಾಣಿ ಡಾಗಿ ಮರಿ ತುಂಬಾ ಇಷ್ಟ. ಡಾಗಿಮರಿ ತುಂಬಾ ಮುದ್ದಾಗಿದೆ. ಅದರ ಬಾಲ ಬಗ್ಗಿದೆ. ಕಿವಿಯೂ ಬಗ್ಗಿದ್ದು ಕಣ್ಣು ಹೊಳಪಾಗಿದೆ. ಅದರ ಮೂಗಿನ ಮೇಲೆ ಪುಟ್ಟಿ ಎಷ್ಟು ಸಾರಿ ಬೆರಳನ್ನು ಇಟ್ಟಿದ್ದಾಳೋ ಎಣಿಸಿದವರು ಇಲ್ಲ. ಇನ್ನೊಂದು ಮೀಸೆ ಪೈಲ್ವಾನ್ ಗೊಂಬೆ ಇದೆ. ಅದಕ್ಕೆ ದೊಡ್ಡ ಮೀಸೆ ಹಾಗೂ ದೊಡ್ಡ ಕಣ್ಣು ಇದೆ. ಕಣ್ಣಿನ ಹುಬ್ಬು ದಪ್ಪಗಾಗಿ ಸಿಟ್ಟಿನ ಹುಬ್ಬಿನ ಹಾಗೆ ಕಾಣುತ್ತದೆ. ಅದು ಅವಳಿಗೆ ಅವಳ ಅಪ್ಪನ ಹಾಗೆಯೇ ಇದೆ ಎಂದು ಅನಿಸುತ್ತದೆ. ಆದರೆ ಅವಳ ಅಪ್ಪ ಹಾಗಿಲ್ಲ. ಅವನ ಸಿಟ್ಟು ಕಂಡಾಗಲೆಲ್ಲ ಅವಳಿಗೆ ಅದೇ ಗೊಂಬೆಯ ನೆನಪಾಗುತ್ತದೆ. ಇನ್ನೊಂದು ಪುಟಾಣಿ ಪಿಗ್ಗಿ ಕರಡಿಮರಿ ಎಲ್ಲಾ ಇವೆ ಅವಳ ಹತ್ತಿರ.

ಆ ದಿನ ಪುಟ್ಟಿ ಮನೆಯ ಗೇಟ್ ತೆಗೆದು ಅಲ್ಲಿ ಆಚೆ ಬದಿಯಲ್ಲಿರುವ ರಸ್ತೆಯಲ್ಲಿ ಓಡಾಡುವ ವಾಹನಗಳನ್ನು ನೋಡುತ್ತಾ ನಿಂತಿದ್ದಳು. ಆಗಲೇ ರಸ್ತೆ ಬದಿಯಿಂದ ಅವಳ ಡಾಗಿ ಗೊಂಬೆಯಂತಹುದೇ ನಾಯಿಮರಿ ನಡೆದು ಕೊಂಡು ಬಂತು. ಪುಟ್ಟಿಗೆ ಅದನ್ನು ನೋಡಿ ತುಂಬಾ ಖುಷಿ ಆಯಿತು. ಅದಕ್ಕೂ ಪುಟ್ಟಿಯನ್ನು ನೋಡಿ ತುಂಬಾ ಖುಷಿಯಾಗಿರಬೇಕು. ಸೀದಾ ಪುಟ್ಟಿಯಿದ್ದಲ್ಲಿಯೇ ಬಂದು ಬಾಲ ಅಲ್ಲಾಡಿಸುತ್ತಾ ನಿಂತಿತು. ಅರೆ ಇದು ಎಲ್ಲಿಂದ ಬಂತು, ಯಾರಾದರೂ ಜೊತೆ ಇದ್ದಾರಾ ಎಂದು ಪುಟ್ಟಿ ನೋಡಿದಳು. ಯಾರೂ ಈ ನಾಯಿಮರಿಯನ್ನು ಗಮನಿಸುತ್ತಿಲ್ಲ. ಅದು ಕುಂಯ್ ಕುಂಯ್ ಎನ್ನುತ್ತಾ ಪುಟ್ಟಿಯ ಕಾಲು ಸುತ್ತು ಹಾಕಲು ತೊಡಗಿತು. ಪುಟ್ಟಿಗೆ ಸಂತೋಷ ತಡೆಯಲಾಗಲಿಲ್ಲ. ಅದನ್ನು ಎತ್ತಿಕೊಂಡು ಮನೆಗೆ ಓಡಿದಳು.

ಪುಟ್ಟಿಯ ಕೈಯಲ್ಲಿರುವ ನಾಯಿಮರಿಯನ್ನು ಮೊದಲು ನೋಡಿದ್ದೇ ಅಪ್ಪ. ‘ಅದೇನನ್ನು ತರುತ್ತಾ ಇದ್ದೀಯ?’ ಎಂದು ಜೋರಾಗಿಯೇ ಕೇಳಿದ. ‘ಇದು ಪುಟಾಣಿ ಡಾಗಿ. ನನಗೆ ಬೇಕು. ನನ್ನ ಡಾಗಿ ಗೊಂಬೆಯ ಹಾಗೆಯೇ ಇದೆ’ ಎನ್ನುತ್ತಾ ಒಳಗೆ ಓಡಿದಳು ಪುಟ್ಟಿ. ‘ಏ ಏ ನಿಲ್ಲು. ಬೀದಿ ನಾಯಿಮರಿ ಯಾಕೆ ತಂದೆ. ಅದನ್ನು ಹೊರಗೆ ಬಿಸಾಕು’ ಎಂದು ಹೇಳುತ್ತ ಅಪ್ಪ ಬೆನ್ನಿಗೇ ಓಡಿ ಬಂದ. ಪುಟ್ಟಿ ಅಮ್ಮನಿದ್ದಲ್ಲಿಗೆ ಬಂದಾಗಿತ್ತು. ಅಪ್ಪ ನಾಯಿಮರಿಯನ್ನು ಕಸಿದು ಅದಕ್ಕೆ ಎರಡು ಪೆಟ್ಟು ಹಾಕಿ ಹೊರಗೆ ಓಡಿಸಲು ಪ್ರಯತ್ನಿಸಿದ. ಆದರೆ ಅದು ಕುಂಯ್ ಕುಂಯ್ ಅನ್ನುತ್ತಾ ಮೂಲೆ ಸೇರಿ ಕುಳಿತಿತು. ನಂತರ ಪುಟ್ಟಿಯೂ ಡಾಗಿಯ ಹಾಗೇ ಅಳಲು ತೊಡಗಿದಳು.

ಈಗ ಅದೆಲ್ಲ ಹಳೆಯ ನೆನಪು. ಡಾಗಿ ಸ್ವಲ್ಪ ದೊಡ್ಡದಾಗಿದೆ. ಆದರೂ ಅಪ್ಪ ದಿನಾಲು ಅದಕ್ಕೆ ಸಣ್ಣ ಉದ್ದನೆಯ ಕೋಲಿನಿಂದ ಹೊಡೆಯುತ್ತಲೇ ಇರುತ್ತಾನೆ. ಪುಟ್ಟಿಯ ಸಂಗಡ ಅದು ಆಡಲು ಪ್ರಯತ್ನಿಸುತ್ತದೆ ಅದರ ಜೊತೆಯಲ್ಲಿ ಆಡುವುದು ಓಡುವುದು ಎಲ್ಲಾ ಪುಟ್ಟಿಗೆ ಇಷ್ಟ. ಆದರೆ ಅಪ್ಪ ಅದನ್ನು ಪಂಜರದಲ್ಲಿ ಹಾಕಿಟ್ಟಿರುತ್ತಾನೆ. ಹೊರಗೆ ಬಿಟ್ಟರೆ ಬಯ್ಯುತ್ತಾನೆ.

ಡಾಗಿಗೆ ಅಪ್ಪ ಹೊಡೆಯುತ್ತಾನೆ ಅಂದೆನಲ್ಲ... ಹೊಡೆಯಲು ಅವನಿಗೆ ಬೇಕಾದಷ್ಟು ಕಾರಣಗಳು ಸಿಗುತ್ತವೆ. ಒಮ್ಮೊಮ್ಮೆ ಸರಿಯಾಗಿ ಊಟ ಮಾಡಲಿಲ್ಲ ಅಂತ ಹೊಡೆಯುತ್ತಾನೆ. ಪುಟ್ಟಿಯ ಸಂಗಡ ವರಾಂಡಕ್ಕೆ ಬಂದರೆ... ಚಪ್ಪಲಿ ಮೂಸಿದರೆ... ಪುಟ್ಟಿಯ ಸಂಗಡ ಆಡಲು ಬಂದರೆ... ಹೀಗೆ ಏನೆಲ್ಲಾ ಕಾರಣಗಳು. ಹೊಡೆತ ಹಾಕಿದಾಗಲೆಲ್ಲ ಡಾಗಿ ದೊಡ್ಡದಾಗಿ ಅಳುತ್ತಿತ್ತು. ಆಗೆಲ್ಲ ಪುಟ್ಟಿಗೆ ನೋವಾಗುತ್ತದೆ.

ಈ ರೀತಿ ಅಪ್ಪ ಹೊಡೆಯುವುದನ್ನು ಹೇಗೆ ತಪ್ಪಿಸಬೇಕು ಎಂದು ಪುಟ್ಟಿಗೆ ಹೊಳೆಯುತ್ತಿಲ್ಲ. ಏನು ಮಾಡಲಿ ಎಂದು ತುಂಬಾ ಯೋಚಿಸಿದಳು. ಡಾಗಿ ಮರಿಯನ್ನು ಅಪ್ಪನಿಲ್ಲದಾಗ ಪಂಜರದಿಂದ ಹೊರಗೆ ಬಿಟ್ಟು ಕಳಿಸಿಬಿಡುತ್ತೇನೆ, ಅದು ಎಲ್ಲಾದರೂ ಬದುಕಿಕೊಳ್ಳಲಿ ಎಂದು ಯೋಚಿಸಿದಳು. ಡಾಗಿಮರಿ ನನ್ನಿಂದ ದೂರ ಆಗುತ್ತದೆ ಎಂದು ಅಪ್ಪನ ಮೇಲೆ ಒಂದಿಷ್ಟು ಹೆಚ್ಚು ಸಿಟ್ಟು ಬಂತು. ಅಪ್ಪ ಆಫೀಸಿಗೆ ಹೋಗಿದ್ದಾಗ ನಿಧಾನವಾಗಿ ಪಂಜರದ ಬಾಗಿಲನ್ನು ತೆರೆದು ಹೊರಗೆ ಕರೆದಳು. ನಂತರ ಮನೆಯ ಮುಂದಿನ ಗೇಟನ್ನು ತೆರೆದು ಹೊರಗೆ ಬಿಟ್ಟಳು. ಡಾಗಿ ಬಾಲ ಅಲ್ಲಾಡಿಸುತ್ತಾ ಪುಟ್ಟಿಯ ಸುತ್ತಲೇ ಸುಳಿಯುತ್ತಿತ್ತು. ಪುಟ್ಟಿ ಎಷ್ಟೇ ಪ್ರಯತ್ನ ಮಾಡಿದರೂ ಅದು ಹೊರಗೆ ಹೋಗಲೇ ಇಲ್ಲ. ಈಗ ಪುಟ್ಟಿ ತಿರುಗಿ ಬಂದು ಅಂಗಳದಲ್ಲಿ ಡಾಗಿಯ ಸಂಗಡ ಬಹಳ ಹೊತ್ತು ಆಟ ಆಡಿದಳು. ಇನ್ನು ಅಪ್ಪ ಬರುವ ಹೊತ್ತಾಯಿತು ಎಂದು ಡಾಗಿಯನ್ನು ಪಂಜರದ ಒಳಗೆ ಸೇರಿಸಿದಳು. ಅವಳಿಗೆ ಡಾಗಿಯನ್ನು ಅಪ್ಪ ಹೊಡೆಯುವುದು ನೆನಪಾಗಿ ಮತ್ತೆ ಬೇಜಾರಾಯಿತು. ಈಗ ಅವಳು ಕೈಬೀಸುತ್ತ ಹೋಗಿ ತನ್ನ ಮೀಸೆ ಪೈಲ್ವಾನ್ ಗೊಂಬೆಯನ್ನು ತಂದು ಡಾಗಿಯ ಪಂಜರದೊಳಗೆ ನೂಕಿ ಬಾಗಿಲು ಹಾಕಿದಳು. ಏನೋ ಸಮಾಧಾನ ಆದಂತೆ ನೋಡುತ್ತಾ ಕುಳಿತಳು. ■